**(ಇಂದು ದಿನಾಂಕ 27-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಪ್ರತಿವಾದಿ ಪರ ಶ್ರೀ ಕೆ ಎಮ್ ಎಚ್ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

**ಪಾಟಿಸವಾಲು ಃ ವಾದಿ ಪರ ಶ್ರೀ. ಎಮ್ ಪಿ ಇ ವಕೀಲರಿಂದ**

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ನಿಗದಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ನಂತರ ನಾನು ಕಲ್ಲನಗೌಡ ಜಂಗಳೆಪ್ಪಗೌಡರ ಇವರನ್ನು ಮದುವೆ ಆದೆ ಎಂದರೆ ಸರಿ. ನನ್ನ ಮತ್ತು ಕಲ್ಲನಗೌಡ ಜಂಗಳೆಪ್ಪಗೌಡರ ಇವರ ಸಂಸಾರದ ಫಲವಾಗಿ ಕಸ್ತೂರಿ ಮತ್ತು ಶೇಖವ್ವಾ ಎನ್ನುವ ಇಬ್ಬರು ಮಕ್ಕಳು ಜನಿಸಿದ್ದಾರೆ ಎಂದರೆ ಸರಿಯಲ್ಲ. ಸದರಿಯವರು ನಾನು ಕಲ್ಲನಗೌಡ ಜಂಗಳೆಪ್ಪಗೌಡರ ಇವರ ಜೊತೆ ಸಂಸಾರ ಮಾಡಿದ ಕಾರಣ ಜನಿಸಿದ್ದಾರೆ ಎಂದರೆ ಸರಿಯಲ್ಲ. ಕಲ್ಲನಗೌಡ ಜಂಗಳೆಪ್ಪಗೌಡರ ಮರಣ ಹೊಂದಿದ ನಂತರ ನಾನು ನನ್ನ ತವರು ಗ್ರಾಮಕ್ಕೆ ಬಂದು 1 ನೇ ಪ್ರತಿವಾದಿಯ ಜೊತೆ ಇದ್ದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನಗೆ 13 ಗುಂಟೆ ಜಮೀನನ್ನು ದಾನಪತ್ರ ಮಾಡಿಕೊಟ್ಟಿದ್ದಾನೆ ಎಂದರೆ ಸರಿ. ವಾದಿಗೆ ಮತ್ತು 2 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು

1 ನೇ ಪ್ರತಿವಾದಿ ದಾವಾ ಸ್ವತ್ತುಗಳನ್ನು ಪರಭಾರೆ ಮಾಡಲು ಪ್ರಯತ್ನಿಸುತ್ತಿದ್ದವೆ ಎಂದರೆ ಸರಿ. ನೀವು 1 ನೇ ಪ್ರತಿವಾದಿಯ ಕಾನೂನ ಬದ್ಧ ಹೆಂಡತಿ ಅಲ್ಲ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯನ್ನೇ ಕೇಳಿ ಎಂದು ಹೇಳುತ್ತಾರೆ. ವಾದಿ ಮತ್ತು 2 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಕಾಯ್ದೆ ಬಾಹಿರವಾಗಿ ಪತ್ರ ಬರೆಯಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾಹಾಗೂ ಸಿಜೆಎಂ, ಧಾರವಾಡ.